## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ

**ಸಿ.ಸಿ. ನಂ. 1478/2023 ಪ್ರಾ.ಸಾ – 1**
**ಚಾ.ಸಾ – 2**

ದಿನಾಂಕಃ **12.08.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಸಂಪತ್ ಕುಮಾರ್ |
| ತಂದೆಯ ಹೆಸರು | : | ರಘುನಾಥ್ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಆಟೋ ಚಾಲಕರು |
| ವಾಸ ಸ್ಥಳ | : | ಟಿ. ಶೆಟ್ಟಿಗೇರಿ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು ಆಟೋ ಚಾಲಕ ದಿ. 18.09.2023 ರಂದು ಶ್ರೀಮಂಗಲದ ಬಸ್ ನಿಲ್ದಾಣದಲ್ಲಿ ಪೊಲೀಸರು ದನದ ಮಾಂಸವನ್ನು ಅಮಾನತುಪಡಿಸಿಕೊಂಡರು. ನಾನು ಸ್ಥಳದಲ್ಲಿ ಅಮಾನತು ಮಹಜರ್‌ಗೆ ಸಹಿ ಮಾಡಿರುತ್ತೇನೆ. ಸಾಕ್ಷಿ ಆ ದಾಖಲೆಯಲ್ಲಿ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 1 ಎಂದು, ಸಹಿಯನ್ನು ನಿ. ಪಿ. 1(ಎ) ಎಂದು ಗುರುತಿಸಲಾಯಿತು. ಚಾಸಾ 3 ರವರು ಹಾಜರಿದ್ದು ಅವರು ಈ ದಾಖಲೆಗೆ ಸಹಿ ಮಾಡಿದರು. ಆರೋಪಿ ಆದಿನ ಅಲ್ಲಿ ಇದ್ದರು ಆದರೆ 2 ವರ್ಷ ಕಳೆದ ಕಾರಣಕ್ಕೆ ಗುರುತು ಹಿಡಿಯಲು ಕಷ್ಟವಾಗುತ್ತಿದೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಮಹಜರ್ ಸಮಯದಲ್ಲಿ ಫೋಟೋ ತೆಗೆದರು ಎಂದರೆ ಸರಿ. ಸಾಕ್ಷಿಯು ಆ

ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 2 ಎಂದು ಗುರುತಿಸಲಾಯಿತು. ಒಂದೊಂದು ಬ್ಯಾಗ್ ನಲ್ಲಿ 2 ಕೆ. ಜಿ. ತೂಗುವಷ್ಟು ಮಾಂಸವಿದ್ದು ಒಟ್ಟು 4 ಪ್ಲಾಸ್ಟಿಕ್ ಕವರ್ ನಲ್ಲಿ ಸೇರಿ ಒಟ್ಟು 8 ಕೆ. ಜಿ. ಇತ್ತು ಎಂದರೆ ಸರಿ. ಫೋಟೋದಲ್ಲಿ ಆರೋಪಿಯನ್ನು ನೋಡಿ ಮತ್ತು ನ್ಯಾಯಾಲಯದಲ್ಲಿ ಆರೋಪಿಯನ್ನು ನೋಡಿ ಈಗ ಗುರುತಿಸಿರುತ್ತಾರೆ. ಆರೋಪಿಯು ಈ ಮಾಂಸವನ್ನು ಕೇರಳ ರಾಜ್ಯದಿಂದ ಕಾಟಿಕೊಳ್ಳಂ ಊರಿನಿಂದ ತಂದ ಎಂದ ಹೇಳಿರುತ್ತಾನೆ ಎಂದರೆ ಸರಿ. ಹೆಚ್ಚಿನ ಬೆಲೆಗೆ ಅದನ್ನು ಮಾರಾಟ ಮಾಡಲು ಅದನ್ನು ತಂದಿರುತ್ತಾನೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ. ಪಿ. ಜೆ ವಕೀಲರಿಂದಃ</u>

ನಾನು 10 ನೇ ತರಗತಿ ಓದಿದ್ದೇನೆ. ಪಂಚರಾಗಲು ನೋಟೀಸ್ ನನಗೆ ಕೊಡಲಿಲ್ಲ, ಕಾರಣ ನಾನು ಅಲ್ಲೇ ಸ್ಥಳದಲ್ಲೇ ಇದ್ದೆ. ನಾನು ನಿ. ಪಿ. 1 ಮಹಜರ್ ಅನ್ನು ಓದಿ ಸಹಿ ಮಾಡಿರುತ್ತೇನೆ. ನಿ. ಪಿ. 1 ಮಹಜರ್ ನಲ್ಲಿರುವ ಎಲ್ಲ ವಿಚಾರಗಳು ಗೊತ್ತು. ನಾನು ನಿ. ಪಿ. 1 ಕ್ಕೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ತೂಕದ ಯಂತ್ರ ಎಂತಹದ್ದು ಎಂದು ಈಗ ನನಗೆ ನೆನಪಿಲ್ಲ. ಪೊಲೀಸರು ಆರೋಪಿಯ ಜೊತೆ ಕನ್ನಡದಲ್ಲಿ ಸಂಭಾಷಣೆ ಮಾಡುತ್ತಿದ್ದರು. ಸುಮಾರು 10.00 ರಿಂದ 11.00 ಗಂಟೆ ಸಮಯದಲ್ಲಿ ಮಹಜರ್ ಮಾಡಿರುತ್ತಾರೆ ನಿಖರ ಸಮಯ ಹೇಳಲಾಗುವುದಿಲ್ಲ. ನಿ. ಪಿ. 2 ಈ ಪ್ರಕರಣಕ್ಕೆ ಸಂಬಂದಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನಿ. ಪಿ. 2 ಫೋಟೋದಲ್ಲಿ ತೂಕದ ಯಂತ್ರ ಕಾಣಿಸುತ್ತಿಲ್ಲ ಆದರೆ ಅಂಗಡಿಯಲ್ಲಿದ್ದ ತೂಕದ ಯಂತ್ರದಿಂದ ತೂಕ ಮಾಡಲಾಯಿತು. ನಾನು ಮೇಲೆ ಹೇಳಿದಂತೆ ಯಾವುದೇ ಸ್ಥಳ ಮಹಜರ್ ಮತ್ತು ಅಮಾನತು ಮಹಜರ್‌ಗೆ ಸಾಕ್ಷಿದಾರನಾಗಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**sd/-**

ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.